

بسم اللهِ الرّحمٰن الرّحيم

# ಪ್ರವಾದಿ ಚರಿತ್ರೆ: ಬದ್ರ್ ಯುದ್ಧ – ರೋಮನ್ ಸಾಮ್ರಾಜ್ಯದ ವಿಜಯದ ಭವಿಷ್ಯ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **22–09–2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಕೆಲವು ವಾರಗಳ ಹಿಂದೆ ಬದ್ರ್ ಯುದ್ಧಕ್ಕೆ ಸಂಬಂಧಪಟ್ಟು ಹಝ್ರತ್ ಪೈಗಂಬರ್(ಸ)ರ ಘಟನೆಗಳನ್ನು ವಿವರಿಸಿದ್ದೆ. ಇಂದು ಬದ್ರಿಗೆ ಸಂಬಂಧಪಟ್ಟುಕೊಂಡೇ ಚರಿತ್ರೆಯಲ್ಲಿರುವ ಮತ್ತು ತಿಳಿಯಲೇಬೇಕಾದ ಕೆಲವು ಘಟನೆಗಳನ್ನು ಮುಂದಿರಿಸುತ್ತೇನೆ. ಹಿಂದಿನ ಖುತ್ಬಗಳಲ್ಲಿ ಪ್ರಸ್ತಾಪಿಸಲಾದಂತೆ ಹಝ್ರತ್ ಪೈಗಂಬರ್(ಸ) ಮೂರು ದಿನಗಳ ತನಕ ಬದ್ರ್ ಮೈದಾನದಲ್ಲಿ ತಂಗಿದರು ಮತ್ತು ಮೂರನೇ ದಿನ ಸವಾರಿ ಮೃಗಗಳ ಜೀನುಗಳನ್ನು ಬಿಗಿಗೊಳಿಸಲು ನಿರ್ದೇಶನ ನೀಡಿದರು.

ಬದ್ರ್ ಮೈದಾನದಲ್ಲಿ ಇದ್ದುಕೊಂಡೇ ಹಝ್ರತ್ ಪೈಗಂಬರ್(ಸ) ವಿಜಯದ ಸುವಾರ್ತೆಯನ್ನು ಮದೀನಕ್ಕೆ ಮುಟ್ಟಿಸಲು ಹಝ್ರತ್ ಅಬ್ದುಲ್ಲಾಹ್ ಬಿನ್ ರವಾಹ(ರ) ಮತ್ತು ಹಝ್ರತ್ ಝೈದ್ ಬಿನ್ ಹಾರಿಸ(ರ)ರನ್ನು ಮದೀನದ ಕಡೆಗೆ ಕಳುಹಿಸಿದರು. ಅನಂತರ ಹಝ್ರತ್ ಪೈಗಂಬರ್(ಸ) ಮದೀನದ ಕಡೆಗೆ ಮರಳಲು ಯಾತ್ರೆ ಆರಂಭಿಸಿದರು.

ಈ ವಿಜಯಶಾಲಿ ಸಂಘದಲ್ಲಿ ಮಕ್ಕದ ಖುರೈಶಿಯರ ಎಪ್ಪತ್ತು ಕೈದಿಗಳು ಸಹ ಇದ್ದರು. ಅವರಲ್ಲಿ ನಝ್ರ್ ಬಿನ್ ಹಾರಿಸ್ ಮತ್ತು ಉಖ್ಬ ಬಿನ್ ಅಬೀ ಮುಈತ್ ಎಂಬ ಇಬ್ಬರು ಕೈದಿಗಳನ್ನು ಯುದ್ಧ ಅಪರಾಧಗಳ ಕಾರಣದಿಂದ ಮಾರ್ಗದಲ್ಲೇ ವಧಿಸಲಾಯಿತು ಎಂದು ಚರಿತ್ರೆಯ ಗ್ರಂಥಗಳಲ್ಲಿ ಬರೆಯಲಾಗಿದೆ. ಆದರೆ ಇದರ ಬಗ್ಗೆ ಎಲ್ಲ ಚರಿತ್ರೆಗಾರರು ಒಮ್ಮತಾಭಿಪ್ರಾಯವನ್ನು ಹೊಂದಿಲ್ಲ. ಅಲ್ಲಾಮ ಇಬ್ನು ಇಸ್‌ಹಾಖ್ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಸಫ್‌ರ ಎಂಬ ಸ್ಥಳಕ್ಕೆ ತಲುಪಿದಾಗ ನಝ್ರ್ ಬಿನ್ ಹಾರಿಸ್‌ನನ್ನು ಹಝ್ರತ್ ಅಲಿ(ರ) ವಧಿಸಿದರು. ಅವರ ಸಹೋದರಿ ತನ್ನ ಸಹೋದರನ ಸಾವಿನ ಕುರಿತು ಕೆಲವು ಪದ್ಯ ಸಾಲುಗಳನ್ನು ಬರೆದರು. ಹಝ್ರತ್ ಪೈಗಂಬರ್(ಸ)ರಿಗೆ ಈ ಪದ್ಯದ ಬಗ್ಗೆ ಗೊತ್ತಾದಾಗ ಹಝ್ರತ್ ಪೈಗಂಬರ್(ಸ) ಬಹಳವಾಗಿ ಅತ್ತರು ಮತ್ತು ಹೀಗೆ ಹೇಳಿದರು: ಈ ಪದ್ಯಗಳು ನಝ್ರ್ ವಧಿಸಲ್ಪಡುವುದಕ್ಕೆ ಮುಂಚಿತವಾಗಿ ನನಗೆ ತಲುಪುತ್ತಿದ್ದರೆ ನಾನು ಆತನನ್ನು ಕ್ಷಮಿಸುತ್ತಿದ್ದೆ. ಕೆಲವು ಚರಿತ್ರೆಗಾರರು ಇದನ್ನು ನಿರಾಕರಿಸುತ್ತಾರೆ. ಕೆಲವರು ಈ ಘಟನೆಯನ್ನೇ ನಿರಾಕರಿಸುತ್ತಾರೆ. ಸತ್ಯ ಏನೆಂದು ಅಲ್ಲಾಹನೇ ಬಲ್ಲನು.

ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಬಂಧಿಗಳಾದ ಮುಖಂಡರಲ್ಲಿ ಉಖ್ಬ ಬಿನ್ ಅಬೀ ಮುಈತ್‌ರ ಹೆಸರನ್ನು ಕೂಡ ಕೆಲವು ಚರಿತ್ರೆಗಾರರು ಪ್ರಸ್ತಾಪಿಸಿರುವರು ಮತ್ತು ಆತನನ್ನು ಬಂಧಿಯಾಗಿರುವಾಗಲೇ ವಧಿಸಲಾಯಿತು ಎಂದು ಬರೆಯಲಾಗಿದೆ. ಆದರೆ ಇದು ಸರಿಯಲ್ಲ. ಹದೀಸ್ ಮತ್ತು ಚರಿತ್ರೆಯಲ್ಲಿ ಬಹಳ ಸ್ಪಷ್ಟವಾಗಿ ಹೀಗೆ ಬಂದಿದೆ: ಉಖ್ಬ ಬಿನ್ ಅಬೀ ಮುಈತ್ ಯುದ್ಧ ಮೈದಾನದಲ್ಲಿ ಕೊಲ್ಲಲ್ಪಟ್ಟನು ಮತ್ತು ಮಕ್ಕದ ಯಾವ ಮುಖಂಡರ ಮೃತಶರೀರಗಳನ್ನು ಹೊಂಡದಲ್ಲಿ ಹೂಳಲಾಗಿತ್ತೋ ಅವುಗಳಲ್ಲಿ ಈತನದ್ದು ಕೂಡ ಇತ್ತು. ಆದರೆ ನಝ್ರ್ ಬಿನ್ ಹಾರಿಸ್‌ರನ್ನು ವಧಿಸಲಾಗಿತ್ತು ಎಂದು ಅನೇಕ ವರದಿಗಳಿಂದ ಸ್ಪಷ್ಟವಾಗುತ್ತದೆ. ಆತನನ್ನು ವಧಿಸಲು ಕಾರಣವೇನಾಗಿತ್ತು ಎಂದರೆ, ಮಕ್ಕದ ಮುಗ್ಧ ಮುಸ್ಲಿಮರು ಕೊಲ್ಲಲ್ಪಡಲು ನೇರವಾದ ಕಾರಣಕರ್ತ ಈತನಾಗಿದ್ದನು. ಯಾರನ್ನಾದರೂ ವಧಿಸಲಾಗಿದ್ದರೆ ಅದು ನಝ್ರ್ ಬಿನ್ ಹಾರಿಸ್‌ನನ್ನೇ ಆಗಿತ್ತು ಎಂಬುದು ಖಚಿತವಾದ ಸಂಗತಿಯಾಗಿದೆ. ಆತನನ್ನು ಪ್ರತೀಕಾರ ನಿಯಮದ ಪ್ರಕಾರ ವಧಿಸಲಾಯಿತು.

ಬದ್ರ್ ಯುದ್ಧದಲ್ಲಿ ಮುಶ್ರಿಕರ ದಿಗ್ಗಜರಾದ ಮುಖಂಡರ ಸಮೇತ ಎಪ್ಪತ್ತು ಸತ್ಯನಿಷೇಧಿಗಳು ವಧಿಸಲ್ಪಟ್ಟರು ಮತ್ತು ಎಪ್ಪತ್ತು ಜನರನ್ನು ಬಂಧಿಸಲಾಯಿತು. ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಾಬಿಯರು ಬದ್ರ್ ಯುದ್ಧದಲ್ಲಿ 140 ಜನರಿಗೆ ನಷ್ಟ ಉಂಟುಮಾಡಿದರು ಎಂದು ಸಹೀಹ್ ಬುಖಾರಿಯಲ್ಲಿ ಬರೆಯಲಾಗಿದೆ. ಎಂದರೆ, 70 ಮಂದಿಗಳನ್ನು ಬಂಧಿಸಲಾಯಿತು ಮತ್ತು 70 ಮಂದಿಗಳನ್ನು ವಧಿಸಲಾಯಿತು.

ಸಹಾಬಿಯರು ಈ ಕೈದಿಗಳೊಂದಿಗೆ ಬಹಳ ಉತ್ತಮವಾಗಿ ವರ್ತಿಸುತ್ತಿದ್ದರು. ಅವರಲ್ಲಿ ಕೆಲವು ಸೌಭಾಗ್ಯಶಾಲಿಗಳಾದ ಕೈದಿಗಳು ಇಸ್ಲಾಮಿನ ಅಧ್ಯಾಪನೆಗಳು ಮತ್ತು ಸಹಾಬಿಯರ ಸ್ವಭಾವಗುಣಗಳಿಂದ ಪ್ರಭಾವಿತರಾಗಿ ಮುಸ್ಲಿಮರಾದರು. ಅವರಲ್ಲಿ ಕೆಲವರ ಹೆಸರುಗಳು ಹೀಗಿವೆ: ಅಬ್ಬಾಸ್ ಬಿನ್ ಅಬ್ದುಲ್ ಮುತ್ತಲಿಬ್, ಅಖೀಲ್ ಬಿನ್ ಅಬೀ ತಾಲಿಬ್, ನೌಫಲ್ ಬಿನ್ ಹಾರಿಸ್, ಅಬುಲ್‌ಆಸ್ ಬಿನ್ ರಬೀಅ್, ಅಬೂ ಅಝೀಝ್, ಖಾಲಿದ್ ಬಿನ್ ಹಿಶಾಂ, ಅಬೂ ದಾಅ ಬಿನ್ ಸಹ್‌ಮಿ, ಅಬ್ದುಲ್ಲಾಹ್ ಬಿನ್ ಉಬಯ್ ಬಿನ್ ಖಲ್‌ಫ್ ಜಮ್‌ಹೀ, ವಹಬ್ ಬಿನ್ ಉಮೈರ್ ಜಮ್‌ಹೀ, ಸುಹೈಲ್ ಬಿನ್ ಅಮ್ರ್ ಆಮಿರಿ. ಇವರೆಲ್ಲರೂ ಪರಿಹಾರಧನವನ್ನು (ಫಿದ್‌ಯ) ಪಾವತಿ ಮಾಡಿಕೊಂಡು ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದ್ದರು.

ಬದ್ರ್ ಯುದ್ಧದೊಂದಿಗೆ ಒಂದು ಸಂಬಂಧ ರೋಮನ್ ಸಾಮ್ರಾಜ್ಯದ ವಿಜಯದೊಂದಿಗೆ ಕೂಡ ಇದೆ. ರೋಮನ್ ಸಾಮ್ರಾಜ್ಯದ ವಿಜಯದ ಕುರಿತು ಹಝ್ರತ್ ಪೈಗಂಬರ್(ಸ) ಭವಿಷ್ಯ ನುಡಿದಿದ್ದರು ಮತ್ತು ಇದರ ಸಂಬಂಧ ಬದ್ರ್ ಯುದ್ಧದೊಂದಿಗೂ ಇದೆ. ಆದ್ದರಿಂದ ಇಲ್ಲಿ ಅದರ ಬಗ್ಗೆ ಪ್ರಸ್ತಾಪಿಸುವುದು ಅನುಯೋಜ್ಯವಾಗಿದೆ. ನುಬುವ್ವತ್ತಿನ ಐದನೇ ವರ್ಷದಲ್ಲಿ ಸೂರಃ ರೂಮ್ ಅವತೀರ್ಣಗೊಂಡಿತ್ತು. ಅದರಲ್ಲಿ ರೋಮನ್ ಸಾಮ್ರಾಜ್ಯದ ವಿಜಯದ ಬಗ್ಗೆ ಭವಿಷ್ಯವಾಣಿ ಇತ್ತು. ಆ ಅಧ್ಯಾಯದ ಆರಂಭಿಕ ವಚನಗಳನ್ನು ಅಲ್ಲಾಹನು ಅವತೀರ್ಣಗೊಳಿಸಿದಾಗ ಹಝ್ರತ್ ಅಬೂಬಕರ್(ರ) ಮಕ್ಕದ ಸುತ್ತಮುತ್ತ ಈ ವಚನಗಳನ್ನು ಪಠಿಸುತ್ತಾ ಹೀಗೆ ಘೋಷಣೆ ಮಾಡಲು ತೊಡಗಿದರು: **ಗುಲಿಬತಿರ್ರೂಮ್.** ಫೀ

**ಅದ್‌ನಲ್ ಅರ್‌ಝಿ ವಹುಂ ಮಿನ್ ಬಅ್‌ದಿ ಗಲಬಿಹಿಮ್ ಸಯಗ್‌ಲಿಬೂನ್. ಫೀ ಬಿಝ್‌ಇ ಸಿನೀನ್.** ಅರ್ಥ: ರೋಮನರು ಪರಾಜಿತರಾದರು. ಅತಿ ಸಮೀಪವಾದೊಂದು ದೇಶದಲ್ಲಿ. ಅವರು ತಮ್ಮ ಪರಾಭವದ ಬಳಿಕ ವಿಜಯಿಗಳಾಗುವರು. ಮೂರರಿಂದ ಒಂಬತ್ತು ವರ್ಷಗಳೊಳಗೆ.

ಸಹೀಹ್ ಬುಖಾರಿಯಲ್ಲಿ ಹೀಗೆ ವರದಿಯಾಗಿದೆ: ಇರಾನಿಯರ ಮತ್ತು ರೋಮನರ ನಡುವೆ ಯುದ್ಧ ನಡೆದಾಗ ಮುಸ್ಲಿಮರು ರೋಮನರ ವಿಜಯವನ್ನು ಇಷ್ಟಪಡುತ್ತಿದ್ದರು. ಏಕೆಂದರೆ ಅವರು ಗ್ರಂಥಾನುಸಾರಿಗಳಾಗಿದ್ದರು. ಆದರೆ ಖುರೈಶಿನ ಸತ್ಯನಿಷೇಧಿಗಳು ಇರಾನಿಯರ ವಿಜಯವನ್ನು ಇಷ್ಟಪಡುತ್ತಿದ್ದರು. ಏಕೆಂದರೆ ಅವರು ಅಗ್ನಿಪೂಜಕರಾಗಿದ್ದರು. ಈ ಮಾತಿನ ಮೇಲೆ ಹಝ್ರತ್ ಅಬೂಬಕರ್[ರ] ಅಬೂಜಹಲ್‌ನೊಡನೆ ಬಾಜಿ ಕಟ್ಟಿದರು. ಐದು ವರ್ಷಗಳ ಕಾಲಾವಧಿಯನ್ನು ನಿರ್ಣಯಿಸಲಾಯಿತು. ಆಗ ಹಝ್ರತ್ ಪೈಗಂಬರ್[ಸ] ಹೇಳಿದರು: ಅಲ್ಲಿ **ಬಿಝ್‌ಉನ್** ಎಂಬ ಪದವನ್ನು ಬಳಸಲಾಗಿದೆ. ಬಿಝ್‌ಉನ್ ಎಂಬುದು 9 ಅಥವಾ ಏಳು ವರ್ಷಗಳನ್ನು ಸೂಚಿಸುತ್ತದೆ. ಆದ್ದರಿಂದ ಕಾಲಾವಧಿಯನ್ನು ವರ್ಧಿಸು ಎಂದು ಹೇಳಿದರು. ಹಝ್ರತ್ ಅಬೂಬಕರ್[ರ] ಹಾಗೆಯೇ ಮಾಡಿದರು. ಅನಂತರ ರೋಮನರು ವಿಜಯಶಾಲಿಗಳಾದರು. ಶಅಬಿ ಹೇಳುತ್ತಾರೆ: ಆ ಕಾಲದಲ್ಲಿ ಬಾಜಿ ಕಟ್ಟುವುದು ಹಲಾಲ್ ಆಗಿತ್ತು.

ಹಝ್ರತ್ ಪೈಗಂಬರ್[ಸ] ಯಾವ ಘಟನೆಗಳ ಬಗ್ಗೆ ಭವಿಷ್ಯ ನುಡಿದಿದ್ದರೋ ಅವುಗಳಲ್ಲಿ ಸುವ್ಯಕ್ತವಾದ ಮತ್ತು ಮಹತ್ತಾದ ಒಂದು ಭವಿಷ್ಯವಾಣಿ ರೋಮ್ ವಿಜಯದ ಭವಿಷ್ಯವಾಣಿಯಾಗಿತ್ತು. ಅರೇಬಿಯದ ಇಬ್ಬದಿಗಳಲ್ಲಿ ಇರಾನ್ ಮತ್ತು ರೋಮಿನ ಆಡಳಿತಗಳು ಇದ್ದುವು. ಇಬ್ಬರ ನಡುವೆ ದೀರ್ಘಕಾಲದಿಂದ ಯುದ್ಧ ಜಾರಿಯಲ್ಲಿತ್ತು. 5 ನಬವೀ, ಎಂದರೆ 614 ಇಸವಿಯಲ್ಲಿ ಇಬ್ಬರ ನಡುವೆ ಘೋರವಾದ ಒಂದು ಯುದ್ಧ ನಡೆಯಿತು. ರೋಮಿನ ಸಾಮ್ರಾಜ್ಯ ಚೆದರಿ ಹೋಯಿತು. ಯುದ್ಧದ ಫಲಿತಾಂಶವು ಮುಸ್ಲಿಮರ ಪ್ರತೀಕ್ಷೆಗೆ ವಿರುದ್ಧವಾಗಿತ್ತು. ನೀವು ನಮ್ಮೊಡನೆ ಯುದ್ಧ ಮಾಡಿದರೆ ನಾವು ಕೂಡ ವಿಜಯಿಗಳಾಗುವೆವು ಎಂದು ಸತ್ಯನಿಷೇಧಿಗಳು ಮುಸ್ಲಿಮರೊಡನೆ ಚುಚ್ಚು ಮಾತಾಗಿ ಹೇಳಿದರು. ಆ ಸಮಯದಲ್ಲಿ ರೋಮನರ ಸ್ಥಿತಿ ಶೋಚನೀಯವಾಗಿತ್ತು. ಖಜಾನೆ ಖಾಲಿಯಾಗಿತ್ತು. ಸೈನ್ಯ ಚದುರಿ ಹೋಗಿತ್ತು. ದೇಶದಲ್ಲಿ ಅರಾಜಕತೆ ತುಂಬಿತ್ತು. ಹೆರಾಕ್ಲಿಯಸ್ ಐಷಾರಾಮಿ ಮತ್ತು ಅಯೋಗ್ಯ ಅರಸನಾಗಿದ್ದನು. ಲಜ್ಜಾಹೀನವಾದ ರೀತಿಯ ತೆರಿಗೆಯನ್ನು ರೋಮನರ ಮೇಲೆ ವಿಧಿಸಲಾಯಿತು. ಚಿನ್ನ, ಬೆಳ್ಳಿ, ರೇಶ್ಮೆಯ ಕಟ್ಟು ಮತ್ತು ಒಂದು ಸಾವಿರ ಹುಡುಗಿಯರನ್ನು ಇರಾನಿಯರಿಗೆ ಒಪ್ಪಿಸಲು ಹೇಳಲಾಗಿತ್ತು. ರೋಮನರ ದುರ್ಬಲ ಸ್ಥಿತಿ ಹೇಗಿತ್ತು ಎಂದರೆ, ಅವರು ಈ ಲಜ್ಜಾಹೀನ ಶರತ್ತುಗಳನ್ನು ಸ್ವೀಕಾರ ಮಾಡಿಕೊಂಡರು. ಇರಾನಿನ ಅಹಂಭಾವಿ ಅರಸನಾದ ಖುಸ್ರೋ ಹೇಳಿದನು: ನನಗೆ ಇವೆಲ್ಲ ಬೇಡ. ಹೆರಾಕ್ಲಿಯಸ್ ಸರಪಳಿಯಲ್ಲಿ ಕಟ್ಟಲ್ಪಟ್ಟು ನನ್ನ ಸಿಂಹಾಸನದ ಕೆಳಗೆ ಬರಬೇಕು ಮತ್ತು ಆತನು ಸೂರ್ಯ ದೇವತೆಯ ಮುಂದೆ ತಲೆ ಬಾಗಿಸಬೇಕು. ಹಾಗಾದರೆ ಸಂಧಾನವನ್ನು ಸ್ವೀಕಾರ ಮಾಡುವೆನು.

ಹೀಗೆ ಬರೆಯಲಾಗಿದೆ: ಪರಿಸ್ಥಿತಿ ಈ ರೀತಿ ಇದ್ದರೂ ಯುದ್ಧ ಭೂಮಿಯಿಂದ ಬಹಳ ದೂರದಲ್ಲಿ ಒಣ ಮತ್ತು ಬಂಜರು ಭೂಮಿಯ ಶೂನ್ಯ ಪರ್ವತದಿಂದ ಒಬ್ಬ ಶಾಂತಿಯ ದೂತ ಪ್ರಕಟಗೊಂಡು ಸ್ಥಿತಿಗತಿಗಳಿಗೆ ಸಂಪೂರ್ಣ ವಿರುದ್ಧವಾಗಿ ರೋಮಿನ ವಿಜಯದ ಬಗ್ಗೆ ಭವಿಷ್ಯವಾಣಿಯನ್ನು ನುಡಿಯುತ್ತಾರೆ. ಸ್ಥಿತಿಗತಿಗಳ ಪ್ರಕಾರ ಈ ಭವಿಷ್ಯವಾಣಿಯ ಈಡೇರಿಕೆ ಅಸಾಧ್ಯ ಮತ್ತು ನಂಬಲಸಾಧ್ಯ. ಈ ಭವಿಷ್ಯವಾಣಿ ಈಡೇರಿದರೆ ಅನೇಕ ಒಂಟೆಗಳನ್ನು ಕೊಡುವುದಾಗಿ ಸತ್ಯನಿಷೇಧಿಗಳು ಮುಸ್ಲಿಮರೊಡನೆ ಬಾಜಿ ಕಟ್ಟಿದರು. ಈಗ ಮುಸ್ಲಿಮರಿಗೆ ಮತ್ತು ಸತ್ಯನಿಷೇಧಿಗಳಿಗೆ ಘಟನೆಗಳ ಫಲಿತಾಂಶವನ್ನು ಅರಿಯುವ ಬಹಳ ಕೌತುಕವಿತ್ತು. ಕೊನೆಗೆ ಕೆಲವೇ ವರ್ಷಗಳ ನಂತರ ಲೋಕವು ಪ್ರತೀಕ್ಷೆಗೆ ವಿರುದ್ಧವಾಗಿ ತಿರುಗಿತು.

ರೋಮಿನ ಅವನತಿಯ ಬಗ್ಗೆ ಬರೆದ ಪ್ರಸಿದ್ಧ ಲೇಖಕ ಮತ್ತು ಚರಿತ್ರೆಗಾರನಾದ ಅಡ್‌ವರ್ಡ್ ಗಿಬ್ಬನ್ ಹೆರಾಕ್ಲಿಯಸಿನ ಸ್ಥಿತಿಯನ್ನು ವಿವರಿಸುತ್ತಾ ಬರೆಯುತ್ತಾರೆ: ರೋಮಿನ ಅರಸ ತನ್ನ ಕೊನೆಯ ದಿನಗಳಲ್ಲಿ ನಪುಂಸಕ ಗೊಂಬೆಯಂತಾಗಿದ್ದನು. ಹೆರಾಕ್ಲಿಯಸಿನ ಸ್ವಭಾವದಲ್ಲಿ ಉಂಟಾದ ಈ ಬದಲಾವಣೆ ಮತ್ತು ಘಟನೆಗಳ ಆಧಾರದಲ್ಲಿ ಅವರ ಅದ್ಭುತಕರವಾದ ಪರಿವರ್ತನೆ ಹಾಗೂ ಅದರ ಕಾರಣಗಳ ವಿವರಣೆಯ ಬಗ್ಗೆ ರೋಮಿನ ಲೇಖಕರು ಆಶ್ಚರ್ಯಕರವಾದ ಮಾತುಗಳನ್ನು ಆಡಿರುವರು. ಆದರೆ ಗಿಬ್ಬನ್ ಹೇಳುತ್ತಾನೆ: ಈ ಘೋರ ಯುದ್ಧಭೂಮಿಯಿಂದ ಬಹಳ ದೂರದಲ್ಲಿ ಒಬ್ಬ ಪ್ರವಾದಿಯ ಕೈ ರೋಮನರ ಸಹಾಯಕ್ಕಾಗಿ ಚಾಚಿತ್ತು ಎಂಬ ಸಂಗತಿ ಜನರಿಗೆ ಗೊತ್ತಿರಲಿಲ್ಲ. ಈ ಪರಿವರ್ತನೆ ಮತ್ತು ಬದಲಾವಣೆಗೆ ಅತ್ಯಂತ ದೊಡ್ಡ ಆಧ್ಯಾತ್ಮಿಕತೆ ಕಾರಣವಾಗಿತ್ತು. ಮುಸ್ತದ್‌ರಕ್ ಮತ್ತು ಜಾಮೀ ತಿರ್ಮಿಧಿಯಲ್ಲಿ ಹೀಗೆ ವರದಿಯಾಗಿದೆ: ರೋಮ್ ಮತ್ತು ಇರಾನಿನ ಯುದ್ಧ ಆರಂಭವಾದಾಗ ಮುಶ್ರಿಕರು ಇರಾನಿಯರ ಬೆಂಬಲಿಗರಾಗಿದ್ದರು. ಏಕೆಂದರೆ ಅವರು ಕೂಡ ಮೂರ್ತಿ ಪೂಜಕರಾಗಿದ್ದರು ಮತ್ತು ಮುಸ್ಲಿಮರು ರೋಮನರ ಬೆಂಬಲಿಗರಾಗಿದ್ದರು. ಏಕೆಂದರೆ, ಅವರು ಗ್ರಂಥಾನುಸಾರಿಗಳಾಗಿದ್ದರು. ಗಿಬ್ಬನ್ ಬರೆಯುತ್ತಾನೆ: ಅಚಾನಕ್ಕಾಗಿ 621ರಲ್ಲಿ ಹೆರಾಕ್ಲಿಯಸ್ ಯುದ್ಧ ಮೈದಾನದ ಸೀಸರ್ ಆಗುತ್ತಾನೆ. ಅರೇಬಿಯದ ಉಮ್ಮೀ ನಬಿಯ ಭವಿಷ್ಯವಾಣಿ ಅಕ್ಷರಶಃ ಈಡೇರುತ್ತದೆ. ಮುಸ್ಲಿಮರು ಬದ್ರ್ ಯುದ್ಧದಲ್ಲಿ ಸತ್ಯನಿಷೇಧಿಗಳನ್ನು ಸೋಲಿಸಿದ ಅದೇ ವೇಳೆ ರೋಮನರು ಇರಾನಿಯರನ್ನು ಸೋಲಿಸಿದರು.

ಕೆಲವು ಯುವಕರು ಮತ್ತು ಯೌವ್ವನಕ್ಕೆ ಹೆಜ್ಜೆ ಹಾಕುವ ಮಕ್ಕಳು ನನಗೆ ಪತ್ರ ಬರೆಯುತ್ತಾರೆ. ಇಸ್ಲಾಂ ಸತ್ಯಧರ್ಮವೆಂದೂ ಹಝ್ರತ್ ಪೈಗಂಬರ್[ಸ] ಸತ್ಯಪ್ರವಾದಿಯೆಂದೂ ಹೇಗೆ ತಿಳಿಯುವುದು ಎಂದು ಕೇಳುತ್ತಾರೆ. ಇಲ್ಲಿಯ ವಾತಾವರಣ ಅವರ ಮೇಲೆ ಇಂತಹ ಪ್ರಭಾವ ಬೀರಲು ಆರಂಭಿಸಿದೆ. ಅವರಿಗೆ ಇಸ್ಲಾಮಿನ ಸತ್ಯತೆಯ ಬಗ್ಗೆ ಸಂಶಯ ಉಂಟಾಗಲು ಆರಂಭವಾಗಿದೆ. ಅವರು ಅನ್ಯರ ಅನಿಸಿಕೆಗಳನ್ನು ಮತ್ತು ಪವಿತ್ರ ಖುರ್‌ಆನಿನ ಭವಿಷ್ಯವಾಣಿಗಳನ್ನು ನೋಡಬೇಕಾಗಿದೆ. ಈ ಭವಿಷ್ಯವಾಣಿಗಳು ಹೇಗೆ ಇಸ್ಲಾಮಿನ ಸತ್ಯತೆಯನ್ನು ಸಾಬೀತುಗೊಳಿಸುತ್ತಿದೆ ಎಂದು ಹೆತ್ತವರು ಸ್ವತಃ ಓದಬೇಕು ಮತ್ತು ಮಕ್ಕಳಿಗೂ ತೋರಿಸಬೇಕು. ಹೆತ್ತವರು ಮತ್ತು ಯುವಕರು ತಮ್ಮ ಅರಿವನ್ನು ವರ್ಧಿಸಬೇಕು. ಪ್ರಶ್ನೆಗಳನ್ನು ಕೇಳುವುದು ಮಾತ್ರ ಸಾಕಾಗುವುದಿಲ್ಲ. ಪ್ರಶ್ನೆಗಳನ್ನು ಕೇಳಲಿದ್ದರೆ ಸ್ವತಃ ಕೂಡ ಅರಿವನ್ನು ಗಳಿಸಬೇಕು. ನಮ್ಮ ಸಂಘಟನೆಗಳು ಕೂಡ ಈ ಕುರಿತು ಜನರಿಗೆ ಅರಿವು ನೀಡಬೇಕು.

ಚರಿತ್ರೆಯ ಪ್ರಕಾರ 609 ಇಸವಿಯಲ್ಲಿ ಹಝ್ರತ್ ಪೈಗಂಬರ್[ಸ] ಪ್ರವಾದಿಯಾಗಿ ನಿಯೋಜಿತಗೊಂಡರು ಎಂದು ಸಾಬೀತಾಗಿದೆ. 610 ಇಸವಿಯಲ್ಲಿ ರೋಮ್ ಮತ್ತು ಇರಾನಿಯರ ಜಗಳ

ಆರಂಭವಾಯಿತು. 613 ಇಸವಿಯಲ್ಲಿ ಯುದ್ಧದ ಘೋಷಣೆಯಾಯಿತು. 614 ಇಸವಿಯಿಂದ ರೋಮನರ ಸೋಲಿನ ಆರಂಭವಾಯಿತು. 616 ಇಸವಿಯಲ್ಲಿ ರೋಮ್ ಪೂರ್ಣವಾಗಿ ಪರಾಜಿತಗೊಂಡಿತು. 622ರ ಇಸವಿಯಲ್ಲಿ ರೋಮನರು ಪುನಃ ದಾಳಿ ಆರಂಭಿಸಿದರು. ಕ್ರಿ.ಶ. 623ರಲ್ಲಿ ಅವರ ವಿಜಯದ ಆರಂಭವಾಯಿತು. 625 ಇಸವಿಯಲ್ಲಿ ಅವರು ಪೂರ್ಣವಾಗಿ ಜಯ ಗಳಿಸಿದರು. ಈ ಕ್ರಮ ಪ್ರಕಾರ ನೋಡುವುದಾದರೆ, ಈ ಭವಿಷ್ಯವಾಣಿಯ ಶ್ರೇಷ್ಠತೆ ಏನೆಂದರೆ, ಸೋಲಿನ ಆರಂಭದಿಂದ ವಿಜಯದ ಆರಂಭದ ತನಕ ಒಂಬತ್ತು ವರ್ಷಗಳಾಗುತ್ತವೆ. ಸೋಲಿನ ಕೊನೆಯಿಂದ ವಿಜಯದ ಕೊನೆಯ ವರೆಗೆ ಇರುವ ವರ್ಷಗಳನ್ನು ಜೋಡಿಸಿದರೆ ಅದು ಕೂಡ ಒಂಬತ್ತು ವರ್ಷಗಳಾಗುತ್ತವೆ. ಈ ವಿಜಯದ ನಂತರ ಹೆರಾಕ್ಲಿಯಸ್ ಹಿಂದಿನಂತೆ ಸೋಮಾರಿ ಮತ್ತು ಆರಾಮಪ್ರಿಯ ಅರಸನಾದನು. ದೈವಿಕ ಶಕ್ತಿ ಕೆಲವು ವರ್ಷಗಳಿಗಾಗಿ ಆತನ ಮೆದುಳನ್ನು ಎಚ್ಚರಗೊಳಿಸಿತು ಮತ್ತು ಭವಿಷ್ಯವಾಣಿಯ ನಂತರ ಐಷಾರಾಮಿ ಮತ್ತು ಅಸಡ್ಡೆಯ ಹಾಸಿಗೆಯಲ್ಲಿ ಆತನನ್ನು ಮಲಗಿಸಲಾಯಿತು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಯೋಚಿಸಿ ನೋಡಿರಿ, ಇದು ಎಷ್ಟು ಅದ್ಭುತಕರ ಮತ್ತು ಮಹತ್ತಾದ ಭವಿಷ್ಯವಾಣಿಯಾಗಿದೆ. ಮುಸ್ಲಿಮರ ದುರ್ಬಲ ಮತ್ತು ಬಲಹೀನ ಸ್ಥಿತಿ ಸ್ವತಃ ಅಪಾಯದಲ್ಲಿದ್ದ ಸಮಯದಲ್ಲಿ ಈ ಭವಿಷ್ಯವಾಣಿಯನ್ನು ನುಡಿಯಲಾಗಿತ್ತು. ಯಾವುದೇ ಸಾಮಾನು ಮತ್ತು ಶಕ್ತಿ ಇರಲಿಲ್ಲ. ಇಂತಹ ಸ್ಥಿತಿಯಲ್ಲಿ ವಿರೋಧಿಗಳು ಹೇಳುತ್ತಿದ್ದರು ಈ ಸಂಘ ಬೇಗನೇ ನಾಶವಾಗುವುದು ಎಂದು. ಕಾಲಾವಧಿಯನ್ನು ಕೂಡ ನಿರ್ಣಯಿಸಲಾಯಿತು. ಅನಂತರ ಆ ದಿನದಂದು ಸತ್ಯವಿಶ್ವಾಸಿಗಳು ಸಂತೋಷಗೊಳ್ಳುವರು ಎಂದು ಹೇಳಿಕೊಂಡು ಎರಡು ಭವಿಷ್ಯವಾಣಿಗಳನ್ನು ಮಾಡಲಾಯಿತು. ಎಂದರೆ, ಆ ದಿನದಂದು ರೋಮನರು ಇರಾನಿಯರ ಮೇಲೆ ವಿಜಯ ಸಾಧಿಸುವರು ಮತ್ತು ಅದೇ ದಿನದಂದು ಮುಸ್ಲಿಮರು ಕೂಡ ಯಶಸ್ಸು ಗಳಿಸಿ ಸಂತೋಷಗೊಳ್ಳುವರು ಎಂದು ನುಡಿಯಲಾಯಿತು. ಹೀಗೆ ಭವಿಷ್ಯ ನುಡಿಯಲಾದಂತೆ ಬದ್ರ್ ದಿನದಂದು ಈ ಭವಿಷ್ಯವಾಣಿ ಈಡೇರಿತು. ಒಂದೆಡೆ ರೋಮನರು ಜಯ ಗಳಿಸಿದರು ಮತ್ತೊಂದೆಡೆ ಮುಸ್ಲಿಮರು ವಿಜಯಿಯಾದರು.

(ಈ ಪರಂಪರೆ ಮುಂದುವರೆಯುವುದು ಇನ್‌ಶಾ ಅಲ್ಲಾಹ್ ಎಂದು ಹುಝೂರ್ ಹೇಳಿದರು.)

(ಖುತ್ಬದ ಕೊನೆಯಲ್ಲಿ ಹುಝೂರ್ ಯು.ಕೆ.ಯ ಸನ್ಮಾನ್ಯ ಫರಾಸ್ ಅಲಿ ಅಬ್ದುಲ್‌ವಾಹಿದ್ ಸಾಹಿಬ್‌ರ ನಿಧನದ ಬಗ್ಗೆ ಪ್ರಸ್ತಾಪಿಸಿಕೊಂಡು ಅವರು ಜಮಾಅತಿಗೆ ಸಲ್ಲಿಸಿದ ಸೇವೆಯ ಬಗ್ಗೆ ಹೇಳಿದರು ಹಾಗು ಜುಮಾ ನಮಾಝ್ ನಂತರ ಅವರ ಜನಾಝ ಗ್ಹಾಇಬ್ ನಿರ್ವಹಿಸುವುದಾಗಿ ಹೇಳಿದರು.)

*****

اَلْحَمْدُلِلّٰہِ نَحْمَدُہٗ وَنَسْتَعِیْنُہٗ وَنَسْتَغْفِرُہٗ وَنُؤْمِنُ بِہٖ وَنَتَوَکَّلُ عَلَیْہِ وَنَعُوْذُ بِاللّٰہِ
مِنْ شُرُوْرِ اَنْفُسِنَا وَمِنْ سَیِّئَاتِ اَعْمَالِنَا مَنْ یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ
فَلَاھَادِیَ لَہٗ ۔ وَنَشْھَدُ اَنْ لَّآ اِلٰہَ اِلَّا اللّٰہُ وَنَشْھَدُ اَنَّ مُحَمَّدًا عَبْدُہٗ وَرَسُوْلُہٗ
عِبَادَ اللّٰہِ رَحِمَکُمُ اللّٰہُ اِنَّ اللّٰہَ یَاْمُرُ بِالْعَدْلِ وَالْاِحْسَانِ وَاِیْتَاءِ ذِی الْقُرْبٰی
وَیَنْھٰی عَنِ الْفَحْشَآءِ وَالْمُنْکَرِ وَالْبَغْیِ یَعِظُکُمْ لَعَلَّکُمْ تَذَکَّرُوْنَ ۝ اُذْکُرُوااللّٰہَ
یَذْکُرْکُمْ وَادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ۔

***Friday Sermon delivered by Hadrath Khaleefatul Masih Al Khamis(atba)***

*At, **'Masjid Mubarak'**, Islamabad, Tilford, UK.* On 22-09-2023

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon